ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಯವರು).—

ಅ) ಕಂದಾಯ ಇಲಾಖೆಯಲ್ಲಿರುವ ಶೀಘ್ರಲಿಪಿಗಾರರ ಒಟ್ಟು ಸಂಖ್ಯೆ. ೧೪೩

ಆ) ಹರಿಜನ-ಗಿರಿಜನ ಪಂಗಡಕ್ಕೆ ಸೇರಿದವರ ಶೀಘ್ರಲಿಪಿಗಾರರ ಸಂಖ್ಯೆ ೫

ಇ) ಈ ನೌಕರರಿಗೆ ಅವರ ಜೇಷ್ಠತೆಗನುಗುಣವಾಗಿ ವಿಶೇಷಲಾತಿ ನಿಯಮಗಳಿಗನುಸಾರವಾಗಿ ಬಡ್ತಿ ನೀಡಲಾಗುತ್ತದೆ.

ಈ) ಬಡ್ತಿ ನೀಡಲಾಗುವ ಹುದ್ದೆಗಳ ಪೈಕಿ ಶೇಕಡ ೫೦ ರಷ್ಟನ್ನು ಶೀಘ್ರಲಿಪಿಗಾರರಿಂದ ತುಂಬ ಬೇಕಾಗಿರುತ್ತದೆ. ರೋಸ್ಟರ್ ನಿಯಮಾನುಸಾರ ಹರಿಜನ-ಗಿರಿಜನ ಪಂಗಡಕ್ಕೆ ಸೇರಿದ ನೌಕರರು ಬಡ್ತಿ ಹೊಂದಲು ಅರ್ಹರಾಗಿರುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ನಾನು ಶೀಘ್ರಲಿಪಿಗಾರರ ಬಗ್ಗೆ ಕೇಳಿದಾಗ ೧೪೩ ಮಂದಿ ಇದ್ದಾರೆ ಇದರಲ್ಲಿ ೫ ಮಂದಿ ಮಾತ್ರ ಹರಿಜನರು ಇದ್ದಾರೆಂದು ಹೇಳಿದ್ದಾರೆ. ನನ್ನ ಲೆಕ್ಕದ ಪ್ರಕಾರ ೨೬ ಮಂದಿಗೆ ಕೊಡಲೇ ಬೇಕಾಗುತ್ತದೆ. ೨೧ ಮಂದಿಗೆ ಕಡಿಮೆ ಮಾಡಿದ್ದೀರಿ. ಏಕೆ ಕಡಿಮೆ ಆಯಿತು. ಎರಡನೆಯದಾಗಿ ಇದುವರೆಗೆ ಪ್ರೊಮೋಷನ್ ಯಾರು ಯಾರಿಗೆ ಕೊಟ್ಟಿದ್ದೀರಿ, ಅದರಲ್ಲಿ ಹರಿಜನರು ಎಷ್ಟು ಜನರಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ. - ನಿಯಮಗಳ ಅನುಗುಣವಾಗಿ ನೇಮಕ ಮಾಡಾವಾಗ ಅರ್ಜಿ ಕೊಡಬೇಕಾಗುತ್ತದೆ. ಶೀಘ್ರಲಿಪಿಯಲ್ಲಿ ಕಡಿಮೆ ಹರಿಜನರು ಬಂದಿದ್ದಾರೆ. ಇಷ್ಟು ವರ್ಷದಿಂದ ೫ ಜನ ಹರಿಜನರು ಬಹಳ ಕಡಿಮೆ ಎಂದು ಒಪ್ಪಿಕೊಳ್ಳುತ್ತೇನೆ, ಇದು ಅಭಿಪ್ರಾಯ ತಪ್ಪು. ಶೀಘ್ರಲಿಪಿಗೆ ಬುದ್ಧಿವಂತಿಕೆ ಬೇಕಾಗುತ್ತದೆ ಬಹಳ ಶ್ರಮ ಪಡಬೇಕಾಗುತ್ತದೆ. ಆದಕ್ಕಾಗಿ ಟ್ರೈನಿಂಗ್ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಶೀಘ್ರಲಿಪಿಗಾರರಲ್ಲಿ ಸ್ವಲ್ಪ ಎರಡು ಭಾಗ ಶಿರಸ್ತೇದಾರರಾಗಲು ಅವಕಾಶ ಇದೆ, ನೌಕರರ ಸಂಘದವರು ಈ ಪ್ರಮಾಣವನ್ನು ಏತಕ್ಕೆ ಏರಿಸಲು ಬೇಡಿಕೆ ಕೊಟ್ಟಿದ್ದಾರೆ, ಎಷ್ಟು ಜನರಿಗೆ ಪ್ರೊಮೋಷನ್ ಸಿಕ್ಕಿದೆ ಎಂಬ ಬಗ್ಗೆ ನನ್ನ ಬಳಿ ವಿವರ ಇಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ನೌಕರರ ಸಂಘದವರು ೫ ಜನರಿಗೆ ಮಾತ್ರ ಕೊಡಿ ಎಂದು ಕೇಳಿದ್ದಾರಾ. ೧೪೩ ಜನರಲ್ಲಿ ಈಗ ಆದ್ಯತೆ ಮೇಲೆ ಹರಿಜನರಿಗೆ ಕೊಡಬೇಕು. ೨೬ ಜನರಿಗೆ ನೀವು ಕೊಡಲೇಬೇಕಾಗುತ್ತದೆ. ೧೪೩ ಜನರಲ್ಲಿ ಎಷ್ಟು ಜನರಿಗೆ ಪ್ರೊಮೋಷನ್ ಕೊಟ್ಟಿದ್ದೀರಿ. ಹರಿಜನರಲ್ಲಿ ಬುದ್ಧಿವಂತರು ಇಲ್ಲವೆಂದು ಹೇಳಿದ್ದೀರಿ, ಹರಿಜನರಲ್ಲಿ ಬುದ್ಧಿವಂತರೂ ಇಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹಾಗೆ ಹೇಳಲಿಲ್ಲ. ಒಂದೂ ಕಡಿಮೆ ಎಂದು ಹೇಳಿದೆ. ಇದು ಕ್ಲೆರಿಕಲ್ ವರ್ಕ್, ಎಕ್ಸಿಕ್ಯೂಟೀವ್ ವರ್ಕ್ ಅಲ್ಲ ಆಫೀಸ್‌ನಲ್ಲಿ ಕಾಳಿತಂ ಕೆಲಸ ಮಾಡ ಬೇಕಾಗುತ್ತದೆ. ಮುಂದೆ ಹುದ್ದೆಗಳನ್ನು ಭರ್ತಿ ಮಾಡುವಾಗ ಹರಿಜನರಿಗೆ ಆದ್ಯತೆ ಕೊಡುತ್ತೇನೆಂದು ಹೇಳುತ್ತೇನೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ನಿಗಮದಿಂದ ತೋಡಿಸಲಾದ ಕೊಳವೆ ಭಾವಿಗಳು.

೩೫೪. ಶ್ರೀ ಎಂ. ಶಿವಣ್ಣ ಹೆಗ್ಗಡ ದೇವನಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ೧೯೮೫ ರಿಂದ ಈವರೆಗೆ ವಿಶೇಷ ಘಟಕ ಯೋಜನೆಗಳ ಮೇರೆಗೆ ತೋಡಿಸಲಾಗಿರುವ ನೀರಾವರಿ (ಕೊಳವೆ) ಬಾವಿಗಳೆಷ್ಟು ? ನೀಡಲಾಗಿರುವ ಸಬ್ಸಿಡಿ ಹಣ ಎಷ್ಟು ?

೨) ತೋಡಲಾಗಿರುವ ಬಾವಿಗಳಲ್ಲಿ ಹಾಲಿ ನೀರಾವರಿ ಸೌಲಭ್ಯ ಪಡೆದಿರುವ ಬಾವಿಗಳೆಷ್ಟು ?

೩) ನೀರಾವರಿ ಬಾವಿಗಳನ್ನು ತೆಗೆದು ಒಂದು ವರ್ಷವಾಗುತ್ತಾ ಬಂದಿದ್ದರೂ ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

೧) ೨,೩೩೪ ಬಾವಿಗಳು—೫೪೯.೪೭ ಲಕ್ಷ ರೂ.ಗಳು.

೨) ೧,೩೫೨ ಬಾವಿಗಳು.

೩) ಇಲ್ಲ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಮೊದಲ ಪ್ರಶ್ನೆಗೆ ೨೩೩೪ ಭಾವಿಗಳಿಂದು ಹೇಳಿದ್ದಾರೆ. ಈ ಯೋಜನೆ ಯಾವಾಗ ಜಾರಿಗೆ ಬಂತು. ಮತ್ತು ೨೩೩೪ ಭಾವಿಗಳಲ್ಲಿ ೧೩೫೨ ಭಾವಿಗಳು ಮಾತ್ರ ನೀರಾವರಿಗೆ ಅಳವಡಿಸಿಕೊಳ್ಳಲಾಗಿದೆ. ಉಳಿದ ಭಾವಿಗಳನ್ನು ಏಕೆ ಅಳವಡಿಸಿಕೊಂಡಿಲ್ಲ ಎಂಬುದನ್ನೂ ಕೇಳಬಯಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಹಾಗೂ ಜನಾಂಗ ನಿಗಮದಿಂದ ಯಾವ ರೈತನು ೫ ಎಕರೆ ಒಳಗೆ ಜಮೀನನ್ನು ಹೊಂದಿರುತ್ತಾನೆ, ಆತನ ನೀರಾವರಿಗಾಗಿ ೮೪-೮೫ರಲ್ಲಿ ಬೋರ್‌ವೆಲ್ ಸ್ಕೀಮ್ ಅನ್ನು ಜಾರಿಗೆ ತಂದಿದ್ದೇವೆ. ಈಗ ಒಟ್ಟು ಎಂಟು ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಜಾರಿಗೆ ಬಂದಿದೆ. ಸಮಾರು ೧೫೨೨ ಬಾವಿಗಳಿಗೆ ವಿದ್ಯುಚ್ಛಕ್ತಿ ಕೊರತೆಯಿಂದ ಪಂಪನ್ನು ಹಾಕದೆ ನೀರಿನ ಕೊರತೆಯಾಗಿದೆ. ಪರಿಶಿಷ್ಟ ಜಾತಿ ಹಾಗೂ ಜನಾಂಗದ ನಿಗಮದಿಂದ ಕ್ರಮ ತೆಗೆದುಕೊಂಡು ಆದಷ್ಟು ಬೇಗ ಪಂಪು ಸೆಟ್ಟನ್ನು ಒದಗಿಸುವ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ಶಿವಣ್ಣ.—ಈ ಯೋಜನೆಗೆ ಕೊಡತಕ್ಕ ಸಬ್ಸಿಡಿ ಅಮೌಂಟ್‌ನಲ್ಲಿ ಕೇಂದ್ರ ಸರ್ಕಾರದ ನೆರವು ಎಷ್ಟು, ರಾಜ್ಯ ಸರ್ಕಾರದ ನೆರವು ಎಷ್ಟು ಎಂಬುದನ್ನು ಕೇಳಬಯಸುತ್ತೇನೆ. ನನ್ನ ಕೊನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಸಚಿವರು ಯಾವುದೇ ಕಂಪ್ಲೇಂಟ್ ಬಂದಿಲ್ಲವೆಂದು ತಿಳಿಸಿದರು. ನನಗೆ ತಿಳಿದ ಹಾಗೆ ಬೋರ್‌ವೆಲ್‌ಗಳನ್ನು ಅಳವಡಿಸಿದ ನಂತರ ಅವುಗಳನ್ನು ರಿಪೇರಿ ಮಾಡಬೇಕಾದರೆ ನಿಗಮದವರಿಗೆ ಬರೆದು, ಅವರು ಬೋರ್‌ವೆಲ್ ಕಂಪನಿಗೆ ಬರೆದು, ಮೆಕ್ಯಾನಿಕ್ ಬಂದು ರಿಪೇರಿ ಮಾಡಬೇಕಾಗಿರುತ್ತದೆ. ಇದರಿಂದ ಬಹಳ ತಡವಾಗುತ್ತದೆ. ನಿಮ್ಮ ನಿಗಮದಿಂದಲೇ ರಿಪೇರಿ ಮಾಡತಕ್ಕ ಸೌಲಭ್ಯವನ್ನು ಸರ್ಕಾರ ಹಾಕಿಕೊಂಡಿದೆಯೇ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯದಂತೆ ಈ ಕಾರ್ಯಕ್ರಮ ಕೇಂದ್ರ ಸರ್ಕಾರದ ಸಹಕಾರದಿಂದ ಜಾರಿಗೆ ಬಂದಿದೆ. ಮಾನ್ಯ ಸದಸ್ಯರ ಕಳವಳದಂತೆ ನಿಗಮದ, ಮಂಡಲ ಸದಸ್ಯರನ್ನು ನಮ್ಮ ಕಛೇರಿಗೆ ಕರೆಯಿಸಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಈ ಬೋರ್‌ವೆಲ್‌ಗಳು ಏನಾ ಫೇಲ್ಯೂರ್ ಆಗಿವೆ ಅವುಗಳನ್ನು ರಿಪೇರಿ ಮಾಡಿಸುವ ಬಗ್ಗೆ ಆದಷ್ಟು ಬೇಗ ಚರ್ಚೆ ಮಾಡಿ ಅದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಶಿವಣ್ಣ.—ಈಗ ಬಾವಿಗಳನ್ನು ತೋಡಲು ಏನಾ ಸಬ್ಸಿಡಿ ಹಣವನ್ನು ಕೊಡಲಾಗಿರುತ್ತದೆ ಅದೇ ರೀತಿ ಈ ಜನರು ತಮ್ಮ ಜಮೀನುಗಳ ಸುತ್ತ ಬೇಲಿ ಹಾಕಿಕೊಳ್ಳಲು ಮತ್ತು ನೀರಾವರಿ ಸೌಲಭ್ಯಕ್ಕೆಂದು ಪೈಪ್‌ಗಳನ್ನು ತಮ್ಮ ಜಮೀನುಗಳಲ್ಲಿ ಅಳವಡಿಸಲು ಹಾಗೂ ಇತರೇ ಅಭಿವೃದ್ಧಿ ಕಾರ್ಯಗಳಿಗೆ ಸಹ ಸಬ್ಸಿಡಿ ಕೊಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಪ್ರಸ್ತುತ ಯೋಜನೆಯಲ್ಲಿ ಇದಕ್ಕೆಲ್ಲಾ ಅವಕಾಶ ಇಲ್ಲ. ಆದರೂ ಇದರ ಬಗ್ಗೆ ಯೋಚನೆ ಮಾಡುತ್ತೇವೆ.

ಮಂಲೆ ಮಹದೇಶ್ವರ ದೇವಾಲಯದ ಆಡಳಿತ

೨೦೨೨. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಧಾರ್ಮಿಕ ಹಾಗೂ ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಮಲೆ ಮಹದೇಶ್ವರ ಬೆಟ್ಟದಲ್ಲಿ ಇರುವ ಕ್ಷೇತ್ರಾಧಿಕಾರಿಯವರ ಆಡಳಿತ ಹಾಗೂ ಇನ್ನೂ ಅನೇಕ ವ್ಯವಹಾರಗಳ ಬಗ್ಗೆ ದೂರುಗಳು ಸರ್ಕಾರಕ್ಕೆ ಬಂದಿರುವುದು ನಿಜವೆ?

ಆ) ಅಲ್ಲದೆ ಆ ಕ್ಷೇತ್ರದಲ್ಲಿರುವ ನೌಕರರ ಬಡ್ತಿ ವಿಷಯದಲ್ಲಿ ಕಾನೂನಿಗೆ ವಿರುದ್ಧವಾಗಿ ಮಾಡಿರುವುದು ಸರ್ಕಾರಕ್ಕೆ ತಿಳಿದಿರುತ್ತದೆಯೆ?